ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

**Bangalore Mysore Infrastructure Corridor Area Planning Authority**

ನಂ. 5, 2ನೇ ಮಹಡಿ, ಲೂಪ್‌ಲೇನ್,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 009.
ಫೋನ್ : 080 22341230/35

No. 5, Second Floor,
Looplane, Race Course Road, Bengaluru - 560 009
Tel : 080 22341230/35 E-mail : bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ನಯೋ-3/ಕಟ್ಟಡ ಅನುಮೋದನೆ/7/2016-17) 923 ದಿನಾಂಕ 17 AUG 2019

## ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1)ರಡಿಯಲ್ಲಿ)

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ಸಂಖ್ಯೆ:25/1ರಲ್ಲಿನ ಏಕ ನಿವೇಶನ ಖಾತಾ ಸಂಖ್ಯೆ: 1502003019003209053ರ ವಿಸ್ತೀರ್ಣ 11,027.68ಚ.ಮೀ ನಿವೇಶನದಲ್ಲಿ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ಕೋರಿರುವ ಬಗ್ಗೆ.

ಉಲ್ಲೇಖ:
1. ಅರ್ಜಿದಾರರ ಮನವಿ ದಿನಾಂಕ:08.02.2017
2. ಈ ಕಛೇರಿಯ ಏಕ ನಿವೇಶನ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ನ.ಯೋ-3/ಏ.ನಿ.ವ.ವಿ/06/2015-16, ದಿನಾಂಕ:12.09.2016
3. ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 34
4. ಈ ಕಛೇರಿ ಸಮಸಂಖ್ಯೆ ಪತ್ರದ ದಿನಾಂಕ:24.07.2019
5. ಧನಲಕ್ಷ್ಮೀ ಬ್ಯಾಂಕ್, ಗಾಂಧೀನಗರ, ಬೆಂಗಳೂರು ಇಲ್ಲಿನ ಡಿ.ಡಿ ಸಂಖ್ಯೆ:848068, 848070 ಮತ್ತು 848069, ದಿನಾಂಕ:25.07.2019.

*****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಪತ್ರದಲ್ಲಿ ಮೆ॥ ರೆಡ್ಡಿಸ್ಟ್ರಕ್ಚರ್ಸ್ ಪ್ರೈ.ಲಿ., ನಂ:133/1, 2ನೇ ಮಹಡಿ, ರೆಸಿಡೆನ್ಸಿ ರಸ್ತೆ, ಬೆಂಗಳೂರು ಇವರು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ಸಂಖ್ಯೆ:25/1ರಲ್ಲಿನ ಏಕ ನಿವೇಶನ ಖಾತಾ ಸಂಖ್ಯೆ: 150200301900320905ರ ವಿಸ್ತೀರ್ಣ 11,027.68ಚ.ಮೀ ನಿವೇಶನದಲ್ಲಿ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು-1, ಕೆಐಎಡಿಬಿ, (ಬಿಎಂಐಸಿಪಿ)ರವರು ಪತ್ರ ಸಂಖ್ಯೆ: ಬಿಎಂಐಸಿಪಿ/ ಎಲ್‌ಎಕ್ಯೂ(1)ಸಿಆರ್/51/2015-16, ದಿನಾಂಕ:19.05.2015ರಲ್ಲಿ ಪ್ರಶ್ನಿತ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು-1, ಕೆಐಎಡಿಬಿರವರು ಪತ್ರ ಸಂಖ್ಯೆ:ಕೆಐಎಡಿಬಿ/ಎಲ್‌ಎಕ್ಯೂ/ಸಿಆರ್/1644/2017-18, ದಿನಾಂಕ:26.03.2018ರಲ್ಲಿ ಈ ಕಛೇರಿಯ ಭೂ ಮಾಪಕರ ವರದಿ ಪ್ರಕಾರ ಕೆಐಎಡಿಬಿ ವತಿಯಿಂದ ಹೊರಡಿಸಲಾಗಿರುವ ಅಧಿಸೂಚನೆಗಳಾದ ವಿಧಿ28(1) ಸಿಐ/ 66/ ಎಸ್‌ಪಿಕ್ಯೂ/ 1996, ದಿನಾಂಕ:11.04.1996, ಸಿಐ/66/ಎಸ್‌ಪಿಕ್ಯೂ/1996, ದಿನಾಂಕ:13.11.1998, ಸಿಐ/66/ಎಸ್‌ಪಿಕ್ಯೂ/1996, ದಿನಾಂಕ:02.03.1998 ಮತ್ತು ವಿಧಿ 28(4)ರ ಸಿಐ/66/ಎಸ್‌ಪಿಕ್ಯೂ/1996, ದಿನಾಂಕ:17.10.1996, ಸಿಐ/66/ ಎಸ್‌ಪಿಕ್ಯೂ/1996(ಭಾಗ), ದಿನಾಂಕ:27.08.1999ರ ಅಧಿಸೂಚನೆಯಲ್ಲಿ ಪ್ರಶ್ನಿತ ಜಮೀನುಗಳು ಭೂಸ್ವಾಧೀನವಾಗಿರುವುದು ಕಂಡುಬರುವುದಿಲ್ಲವೆಂದು ತಿಳಿಸಿರುತ್ತಾರೆ.

**ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/522/ಮೈಅಪ್ರಾ/2005, ದಿನಾಂಕ:10.03.2006ರಲ್ಲಿ ಹೊರಡಿಸಿರುವ ಅಂಶಗಳಿಗೆ ಅನುಗುಣವಾಗಿ ಹಾಗೂ** ದಿನಾಂಕ:16.04.2015ರಂದು ಜರುಗಿದ ಪ್ರಾಧಿಕಾರದ 44ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:44.7.1ರ ತೀರ್ಮಾನದಂತೆ ಉಲ್ಲೇಖ(2)ರಲ್ಲಿ ಪ್ರಾಧಿಕಾರದಿಂದ ಏಕ ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2)ರಡಿಯಲ್ಲಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿರುತ್ತದೆ.

ಪ್ರಸ್ತಾವನೆಯನ್ನು ಉಲ್ಲೇಖ(3)ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, *ವಿಷಯದ ಬಗ್ಗೆ ಚರ್ಚಿಸಲಾಗಿದೆ. ಅರ್ಜಿದಾರರು ಸಲ್ಲಿಸಿರುವ ಕಟ್ಟಡ ನಕ್ಷೆಗಳು ವಲಯ ನಿಯಮಾವಳಿಗನುಗುಣವಾಗಿರುವುದರಿಂದ, ಪ್ರಾಧಿಕಾರದ ವಲಯ ನಿಯಮಾವಳಿಯಂತೆ ಅರ್ಜಿದಾರರಿಂದ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುವುದರಿಂದ, ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 15(1)ರಂತೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.*

ಪ್ರಾಧಿಕಾರದ ತೀರ್ಮಾನದನ್ವಯ ನಿಗದಿತ ಶುಲ್ಕಗಳನ್ನು ಪಾವತಿಸಲು ತಿಳಿಸಿದ ಮೇರೆಗೆ ಉಲ್ಲೇಖ(3)ರಲ್ಲಿ ಅರ್ಜಿದಾರರಿಗೆ ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ಉಲ್ಲೇಖ(5)ರಲ್ಲಿ ರೂ.1,17,100/– (ಒಂದು ಲಕ್ಷದ ಹದಿನೇಳು ಸಾವಿರದ ಒಂದುನೂರು) ಗಳ ಶುಲ್ಕವನ್ನು 03 ಬ್ಯಾಂಕರ್ಸ್ ಚೆಕ್ ಮುಖೇನ ಪಾವತಿಸಿರುತ್ತಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ಸಂಖ್ಯೆ:25/1ರಲ್ಲಿನ ಏಕ ನಿವೇಶನ ಖಾತಾ ಸಂಖ್ಯೆ: 150200301900320905ರ ವಿಸ್ತೀರ್ಣ 11,027.68ಚ.ಮೀ ನಿವೇಶನದಲ್ಲಿ ಒಟ್ಟು 312 ವಸತಿ ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಾಣ ಮಾಡಲು ಕೆಟಿಸಿಪಿ ಕಾಯ್ದೆ, 1961ರ ಕಲಂ 15(1)ರಡಿಯಲ್ಲಿ ಕೆಳಕಂಡ ತಾಂತ್ರಿಕ ವಿವರಗಳೊಂದಿಗೆ ಮತ್ತು ಷರತ್ತುಗಳೊಂದಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

| ಕ್ರ. ಸಂ | ವಿವರಗಳು | ವಲಯ ನಿಯಮಾವಳಿಯಂತೆ | ಸಲ್ಲಿಸಿರುವ ನಕ್ಷೆಯಂತೆ |
|---|---|---|---|
| 1. | ನಡು ಜಾಗಗಳು | ಮುಂಭಾಗ – 11.0ಮೀ<br>ಹಿಂಭಾಗ – 11.0ಮೀ<br>ಎಡಭಾಗ – 11.0ಮೀ<br>ಬಲಭಾಗ – 11.0ಮೀ | ಮುಂಭಾಗ – 11.0ಮೀ<br>ಹಿಂಭಾಗ – 11.0ಮೀ<br>ಎಡಭಾಗ – 11.0ಮೀ<br>ಬಲಭಾಗ – 11.0ಮೀ |
| 2. | ನಿವೇಶನದ ವಿಸ್ತೀರ್ಣ (ಏಕ ನಿವೇಶನ ನಕ್ಷೆ ಅನುಮೋದನೆಯಂತೆ) | – | 11027.53 ಚ.ಮೀ |
| 3. | ಕಟ್ಟಡದ ಪ್ಲಿಂತ್ ವಿಸ್ತೀರ್ಣ | – | 5400.06ಚ.ಮೀ |
| 4. | ಕಟ್ಟಡದ ಒಟ್ಟು ವಿಸ್ತೀರ್ಣ | – | 49765.29 ಚ.ಮೀ |

| | | | |
|---|---|---|---|
| 5. | ಒಟ್ಟು ಆವರಿಸುವಿಕೆ (ಶೇಕಡ) | 50% | 5400.06ಚ.ಮೀ (48.97%) |
| 6. | ಒಟ್ಟು ಅನುಪಾತ | 2.75 (30325.71ಚ.ಮೀ) | 2.747 (30288.23 ಚ.ಮೀ) |
| 7. | ವಸತಿ ಘಟಕಗಳ ಸಂಖ್ಯೆ | – | 312 |
| 8. | ಕಟ್ಟಡದ ಎತ್ತರ | 35.0ಮೀ | 34.9ಮೀ |
| 9. | ವಾಹನ ನಿಲುಗಡೆ (ಕಾರ್ ಪಾರ್ಕಿಂಗ್) | 50 - 90 ಚ.ಮೀ 183 = 92<br>>90 ಚ.ಮೀ 129 = 129<br>10% Visitor's Car = 23<br>Auditorium 335.84 = 07<br>ಒಟ್ಟು <u>250</u> | ಒಟ್ಟು <u>301</u> |

"ಷರತ್ತುಗಳು"

1) *ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಾಸದ ಉಪಯೋಗಕ್ಕೆ ಮಾತ್ರ ಉಪಯೋಗಿಸತಕ್ಕದ್ದು ಮತ್ತು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಕಟ್ಟಡ ಪರವಾನಿಗೆ (ಲೈಸೆನ್ಸ್) ಪಡೆದ ನಂತರವಷ್ಟೇ ಕಾಮಗಾರಿಗಳನ್ನು ಪ್ರಾರಂಭಿಸಿ ಅನುಮೋದಿತ ನಕ್ಷೆಯಂತೆ ಕಟ್ಟಡ ಕಟ್ಟಿಸತಕ್ಕದ್ದು.*
2) *ಇದು ಕಟ್ಟಡ ನಿರ್ಮಾಣದ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ.*
3) *ಕಟ್ಟಡ ನಿರ್ಮಾಣಕ್ಕೆ ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡಗಳ ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.*
4) *ಈ ಪ್ರಾರಂಭಿಕ ಪ್ರಮಾಣ ಪತ್ರವು ಮಂಜೂರಾದ ದಿನಾಂಕದಿಂದ ಎರಡು ವರ್ಷಗಳವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ. ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.*
5) *ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾಮಗಾರಿ ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.*
6) *ಕಟ್ಟಡ ರಚನೆಯನ್ನು IS 1893–2002ರನ್ವಯ ಭೂಕಂಪ ನಿರೋದಕ ತಂತ್ರಜ್ಞಾನವನ್ನು ಬಳಸಿ [illegible]ಸುವುದರ ಜೊತೆಗೆ ಅದರಂತೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.*
7) Chief Engineer (Ele.) BMAZ (South) Bescom, *ರವರ ಪತ್ರ ಸಂಖ್ಯೆ:* CEE/ BMASZ/SEE(O)/ AEE-2/F-116/19-20/2076-79, *ದಿನಾಂಕ:28.06.2019ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.*

8) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸೂಲಿಗೆರೆ ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ: ಸೂ.ಗ್ರಾ.ಪಂ/117/2018–19, ದಿನಾಂಕ:21.01.2019ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

9) Senior Environmental Officer ರವರ ಪತ್ರ ಸಂಖ್ಯೆ:PCB/322/CNP/16/H-641, ದಿನಾಂಕ:05.12.2016 ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

10) Member Secretary, SEIAA, Karnataka ರವರ ಪತ್ರ ದಿನಾಂಕ:03.10.2013 ಮತ್ತು ದಿನಾಂಕ:29.10.2017ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

11) Director General of Police and Director, Karnataka State Fire & Emergency Services, Bangalore ರವರ ಪತ್ರ ಸಂಖ್ಯೆ: KSFES/GBC(1)/435, ದಿನಾಂಕ:24.10.2018ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

12) AAI, ರವರ ಪತ್ರ ಸಂಖ್ಯೆ: AAI/KIA/ATM/NOC/375-378, ದಿನಾಂಕ:28.04.2015ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

13) Chief General Manager, Bharat Sanchar Nigam Limited, Karnataka Telecom Circle, No:1, Swamy Vivekananda Road, Halsuru, Bangaloreರವರ ಪತ್ರ ಸಂಖ್ಯೆ: AGM(TP)/ S-36/Vol-36/2015-16/21, ದಿನಾಂಕ:28.05.2015ರ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

14) ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಇಡತಕ್ಕದ್ದು.

15) ಕಟ್ಟಡ ಕಟ್ಟುವ ಸಾಮಗ್ರಿಗಳನ್ನು ರಸ್ತೆಯಲ್ಲಿ ಶೇಖರಣೆ ಮಾಡಬಾರದು. ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯವರು ವಿಧಿಸುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು

16) ಸದರಿ ವಸತಿ ಯೋಜನೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಸೂಕ್ತ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.

17) ಕಟ್ಟಡ ನಕ್ಷೆ ಅನುಮೋದನೆಗೆ ಈಗಾಗಲೇ ವಿಧಿಸಿರುವ ಶುಲ್ಕಗಳಲ್ಲದೆ, ಸರ್ಕಾರವು ಆಗಿಂದಾಗ್ಗೆ ಹೊರಡಿಸಬಹುದಾದ ಆದೇಶಗಳಲ್ಲಿ ವಿಧಿಸಬಹುದಾದ ಶುಲ್ಕಗಳನ್ನು ಅರ್ಜಿದಾರರು ಭರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

18) ಕಟ್ಟಡ ಮುಂಭಾಗದಲ್ಲಿ ಕನಿಷ್ಠ ಎರಡು ಮರಗಳನ್ನು ಬೆಳೆಸತಕ್ಕದ್ದು.

19) ನಿರ್ಮಾಣ ಕಾರ್ಯಕ್ಕೆ ಬಾಲಕಾರ್ಮಿಕರನ್ನು ನಿಯೋಜಿಸತಕ್ಕದಲ್ಲ.

20) ನಿವೇಶನದ ಆವರಣದೊಳಗೆ ಮಳೆಯ ನೀರನ್ನು ಸಂರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

21) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.

22) ಈ ಕಟ್ಟಡ ನಕ್ಷೆ ಮಂಜೂರಾತಿ ಪಡೆಯಲು ನೀವು ತಪ್ಪು ಮಾಹಿತಿ/ ದಾಖಲೆಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಪ್ರಾಧಿಕಾರವು ನೀಡಿರುವ ಅನುಮೋದನೆ ರದ್ದುಪಡಿಸಲಾಗುವುದು.

23) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಹಾಗೂ ಸಂಬಂಧಿತ ನಿಯಮಗಳು, 2017ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಕೊಳ್ಳದೇ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಜಾಹೀರಾತು ನೀಡುವುದಾಗಲೀ, ಬುಕಿಂಗ್ ಮಾಡುವುದಾಗಲೀ ಅಥವಾ ಮಾರಾಟ ಮಾಡುವಂತಿಲ್ಲ.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ತಮ್ಮ ಗಮನಕ್ಕೆ ತರಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ
ನಿರ್ದೇಶಕರು ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ಗೆ,
ಮೆ॥ ರೆಡ್ಡಿಸ್ಟ್ರಕ್ಚರ್ಸ್ ಪ್ರೈ.ಲಿ.,
ನಂ:133/1, 2ನೇ ಮಹಡಿ,
ರೆಸಿಡೆನ್ಸಿ ರಸ್ತೆ,
ಬೆಂಗಳೂರು

Housiey.com

# ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

## Bangalore Mysore Infrastructure Corridor Area Planning Authority

ನಂ. 5, 2ನೇ ಮಹಡಿ, ಲೂಪ್‌ಲೇನ್,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 009.
ಫೋನ್ : 080 22341230 / 35

No. 5, Second Floor,
Looplane, Race Course Road, Bengaluru - 560 009
Tel : 080 22341230/35 E-mail : bmicapa@gmail.com


"ನೊಂದಾಯಿತ ಅಂಚೆ ಸ್ವೀಕೃತಿ ಬಾಕಿ"

ಸಂಖ್ಯೆ: ಬಿಎಂಐಸಿಎಪಿಎ/ನಯೋ-3/ಕಟ್ಟಡ ಅನುಮೋದನೆ/7/2016-17/1496 ದಿನಾಂಕ: 30 MAR 2022

"ಪ್ರಾರಂಭಿಕ ಪ್ರಮಾಣ ಪತ್ರ (ನವೀಕರಣ)"

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ಸಂಖ್ಯೆ:25/1ರಲ್ಲಿನ ಏಕ ನಿವೇಶನ ಖಾತಾ ಸಂಖ್ಯೆ: 150200301900320905ರ ವಿಸ್ತೀರ್ಣ 11,027.68ಚ.ಮೀ ನಿವೇಶನದಲ್ಲಿ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ನೀಡಿರುವ ಅನುಮೋದನೆಯನ್ನು ನವೀಕರಣ ನೀಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ನಯೋ-3/ಕಟ್ಟಡ ಅನುಮೋದನೆ/7/2016-17, ದಿನಾಂಕ: 07.08.2019
2. ಅರ್ಜಿದಾರರ ಮನವಿಯ ದಿನಾಂಕ: 19.03.2022

*****

ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೊಮ್ಮಘಟ್ಟ ಗ್ರಾಮದ ಸರ್ವೆ ಸಂಖ್ಯೆ:25/1ರಲ್ಲಿನ ಏಕ ನಿವೇಶನ ಖಾತಾ ಸಂಖ್ಯೆ: 150200301900320905ರ ವಿಸ್ತೀರ್ಣ 11,027.68ಚ.ಮೀ ನಿವೇಶನದಲ್ಲಿ ಉಲ್ಲೇಖ(1)ರಂತೆ ಅನುಮೋದನೆಯನ್ನು ನೀಡಿರುವ ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರದ ಊರ್ಜಿತಾವಧಿಯು ಮುಕ್ತಾಯವಾಗಿರುವುದರಿಂದ ಸದರಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ನವೀಕರಿಸಿ ನೀಡಲು ಉಲ್ಲೇಖ(2)ರ ಮನವಿಯಲ್ಲಿ ಕೋರಲಾಗಿದೆ.

ಪರಿಶೀಲಿಸಲಾಗಿ, ಕಟ್ಟಡ ಕಾಮಗಾರಿ ಕೈಗೊಂಡಿರದಿರಲು ಕೋವಿಡ್-19 ಕಾರಣ ನೀಡಿ ಉಲ್ಲೇಖಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ಉಲ್ಲೇಖ(1)ರಲ್ಲಿ ದಿನಾಂಕ:07.08.2019ರಂದು ವಸತಿ ಅಪಾರ್ಟ್‌ಮೆಂಟ್ ಕಟ್ಟಡ ಕಟ್ಟಲು ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರದಲ್ಲಿನ ಆದೇಶದಲ್ಲಿನ ಷರತ್ತುಗಳನ್ನು ಮುಂದುವರೆಸುತ್ತಾ, ಪ್ರಾಧಿಕಾರದಿಂದ ನೀಡಿರುವ ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರದ ಅವಧಿ ಮುಕ್ತಾಯ ದಿನಾಂಕದಿಂದ ಎರಡು ವರ್ಷಕ್ಕೆ (ದಿನಾಂಕ:30.03.2022 ರಿಂದ 29.03.2024ರವರೆಗೆ) ಕಾಲಾವಧಿಯನ್ನು ವಿಸ್ತರಿಸಿ ಅನುಮೋದನೆ ನೀಡಲಾಗಿದೆ.

30/3/2022

ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ಗೆ,

ಮೆ॥ ರೆಡ್ಡಿಸ್ಟ್ರಕ್ಚರ್ಸ್ ಪ್ರೈ.ಲಿ.,
ನಂ:133/1, 2ನೇ ಮಹಡಿ,
ರೆಸಿಡೆನ್ಸಿ ರಸ್ತೆ,
ಬೆಂಗಳೂರು

**ಪ್ರತಿಯನ್ನು:**

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸೂಲಿಕೆರೆ ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ. ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ), ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬ್ಲಿ ಬ್ಲಾಕ್, ಸಿಎಸ್ಐ ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಯುನಿಟಿ ಬಿಲ್ಡಿಂಗ್, ಸಂಪಂಗಿರಾಮ ನಗರ, ಬೆಂಗಳೂರು-560027 ಇವರಿಗೆ ಮಾಹಿತಿ ಕಳುಹಿಸಲಾಗಿದೆ.

1112 Va Ba Ltrs